ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ
ಓಎಸ್ ನಂಃ ೩೩/೨೦೧೭

ದಿನಾಂಕಃ ೦೮-೦೮-೨೦೧೮ ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- ಶ್ರೀ ಕೆ ಪಿ ಬಿ ವಕೀಲರಿಂದಃ-

ನಾನು ಎಂಎ.ಬಿಎಡ್ ಪದವಿಧರೆಯಾಗಿರುತ್ತೇನೆ. ನಾನು ಮೈಸೂರಿನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ನ್ಯಾಯಾಲಯದ ವಿಚಾರಗಳು ಸ್ವಲ್ಪ ಮಟ್ಟಿಗೆ ಗೊತ್ತಿರುತ್ತದೆ. ನನಗೆ ಈಗ ತೋರಿಸುತ್ತಿರುವ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ಸಹಿಗಳು ನನ್ನದೆ ಆಗಿರುತ್ತವೆ. ಆ ಪ್ರಮಾಣಪತ್ರವನ್ನು ನಿಮ್ಮ ವಕೀಲರು ತಯಾರಿಸಿ ರುಜು ಮಾಡು ಎಂದು ಹೇಳಿದ ಕಾರಣ ರುಜು ಮಾಡಿರುತ್ತೇನೆ ಎನ್ನುವ ಸಲಹೆಗೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಈ ದಾವೆಯನ್ನು ನಮ್ಮ ತಂದೆಯಿಂದ ನಮಗೆ ಬರಬೇಕಾದ ಆಸ್ತಿಯನ್ನು ಪಡೆಯುವ ಸಲುವಾಗಿ ಹಾಕಿರುತ್ತೇನೆ. ನಾನು ೯ ಜನರ ವಿರುದ್ದ ಈ ದಾವೆಯನ್ನು ಹಾಕಿರುತ್ತೇನೆ. ೯ನೇ ಪ್ರತಿವಾದಿ ಚಂಗಪ್ಪನವರ ಮಗ ಆಗಿರುತ್ತಾರೆ. ನನ್ನ ತಾತ ಬೋಪಯ್ಯ ಹಾಗೂ ೯ನೇ ಪ್ರತಿವಾದಿಯ ಚಂಗಪ್ಪ ಅಣ್ಣತಮ್ಮಂದಿರಾಗಿರುತ್ತಾರೆ. ನಾನು ಬೋಪಯ್ಯ ಹಾಗೂ ಚಂಗಪ್ಪ ಇಬ್ಬರ ಆಸ್ತಿಯನ್ನು ಸೇರಿಸಿ ಪಾಲು ಕೇಳಿ ದಾವೆ ಹಾಕಿದ್ದೇನೆ ಎನ್ನುವುದು ಸರಿಯಲ್ಲ. ನಾನು ನಮ್ಮ ತಾತನ ಆಸ್ತಿಯಲ್ಲಿ ಮಾತ್ರ ಪಾಲನ್ನು ಕೇಳಿ ಈ ದಾವೆಯನ್ನು ಹಾಕಿರುತ್ತೇನೆ. ೯ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳಲ್ಲಿ ಇದ್ದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ೯ನೇ ಪ್ರತಿವಾದಿಯ ಆಸ್ತಿಗಳಲ್ಲಿ ನಾನು ಪಾಲನ್ನು ಕೇಳುತ್ತಿಲ್ಲ.

ದಾವಾಸ್ತಿಗಳ ಕೆಲವು ಸರ್ವೆ ನಂಬರ್‌ಗಳು ಹಾಗೂ ವಿಸ್ತೀರ್ಣ ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ಸರ್ವೆ ನಂ.೨೯/೧, ೩೦/೧೨, ೯೯/೧೨, ೯೯/೧೩, ೯೯ರಲ್ಲಿ ವಿಭಜನೆಯಾಗದಿರುವ ಜಾಗಗಳು, ೯೫/೩, ೯೫/೨ಗಳ ಬಗ್ಗೆ ಹಾಕಿರುತ್ತೇನೆ. ಈ ಎಲ್ಲಾ ಸರ್ವೆ ನಂಬರ್‌ಗಳಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ, ಮೇಲೆ ಹೇಳಿದ ಆಸ್ತಿಗಳ ಚೆಕ್ಕುಬಂದಿಗಳನ್ನು ನನಗೆ ಹೇಳಲು ಆಗುವುದಿಲ್ಲ.

ದಾವಾಸ್ತಿಗಳು ಎಲ್ಲಿ ಇರುತ್ತವೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುವುದು ಸರಿಯಲ್ಲ, ಆ ಆಸ್ತಿಗಳು ಮಾಯಮುಡಿ ಗ್ರಾಮದಲ್ಲಿ ಇರುತ್ತವೆ. ಎಲ್ಲಾ ಆಸ್ತಿಗಳನ್ನು ಸ್ಥಳದಲ್ಲಿ ನೋಡಿದರೆ ನಾನು ಗುರುತಿಸಬಲ್ಲೆ.

ಸರ್ವೆ ನಂ.೬೫/೨ ಬೋಪಯ್ಯನವರ ಆಸ್ತಿ ಅಲ್ಲ ಎಂದರೆ ಸಾಕ್ಷಿ ಅದು ಜಂಟಿಯಲ್ಲಿರುತ್ತದೆ ಆದ್ದರಿಂದ ನಾನು ಅದು ಬೋಪಯ್ಯನವರ ಆಸ್ತಿ ಎಂದು ನಾನು ಅಂದುಕೊಂಡಿದ್ದೇನೆ ಎನ್ನುತ್ತಾರೆ.

ಸರ್ವೆ ನಂ.೬೫/೩ಯನ್ನು ನಾನು ನಿಖರವಾಗಿ ಗುರುತಿಸಬಲ್ಲೆ. ಸರ್ವೆ ನಂ.೬೫/೨ನ್ನು ಗುರುತಿಸಲು ಸ್ವಲ್ಪ ಕಷ್ಟವಾಗುತ್ತದೆ. ಸರ್ವೆ ನಂ.೬೫/೨ರಲ್ಲಿ ಎಷ್ಟು ವಿಸ್ತೀರ್ಣ ಬರುತ್ತದೆ ಹಾಗೂ ಸರ್ವೆ ನಂ.೬೫/೩ರಲ್ಲಿ ಎಷ್ಟು ವಿಸ್ತೀರ್ಣ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ.

ಬೋಪಯ್ಯ ಹಾಗೂ ಚಂಗಪ್ಪನವರ ತಂದೆ ಯಾರು ಎಂದು ನನಗೆ ಗೊತ್ತಿಲ್ಲ. ಬೋಪಯ್ಯನವರಿಗೆ ನಾಲ್ಕು ಜನ ಗಂಡು ಮಕ್ಕಳು ಇದ್ದರು. ಬೋಪಯ್ಯನವರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ, ಚಂಗಪ್ಪನವರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ, ಬೋಪಯ್ಯ ಮತ್ತು ಚಂಗಪ್ಪನವರು ಅವರ ತಂದೆಯ ಆಸ್ತಿಗಳನ್ನು ಭಾಗ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ, ಬೋಪಯ್ಯ ನಾಲ್ಕು ಮಕ್ಕಳು ಮುತ್ತಣ್ಣ, ತಿಮ್ಮಯ್ಯ, ಚಂಗಪ್ಪ ಹಾಗೂ ಬಿದ್ದಪ್ಪ ಆಗಿರುತ್ತಾರೆ. ಬೋಪಯ್ಯನವರ ನಾಲ್ಕು ಮಕ್ಕಳು ಬೋಪಯ್ಯನವರು ತೀರಿಕೊಂಡ ನಂತರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಈ ವಿಚಾರ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾವು ಈಗ ಸರ್ವೆ ನಂ.೬೯ರಲ್ಲಿ ಸ್ವಾಧೀನವನ್ನು ಹೊಂದಿದ್ದೇವೆ. ಎಷ್ಟು ಎಕರೆ ಸ್ವಾಧೀನ ಇದ್ದೇವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ, ಸುಮಾರು ಅರ್ಧ ಎಕರೆಯಷ್ಟು ಸ್ವಾಧೀನ ಇರಬಹುದು. ಈ ಅರ್ಧ ಎಕರೆಯನ್ನು ಹೊರತುಪಡಿಸಿ ಬೇರೆ ಯಾವುದೇ ಕುಟುಂಬದ ಆಸ್ತಿ ನಮ್ಮ ಭಾಗಕ್ಕೆ ಬಂದಿರುವುದಿಲ್ಲ.

ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದರೆ ಅದು ಶಿಕ್ಷಾರ್ಹ ಅಪರಾಧ ಎನ್ನುವುದು ಸರಿ. ನಾನಾಗಲಿ ನನ್ನ ತಂದೆಯಾಗಲಿ ತಾಯಿಯಾಗಲಿ ಯಾವುದೇ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ.

೪ನೇ ಪ್ರತಿವಾದಿ ನನಗೆ ಗೊತ್ತಿರುತ್ತಾರೆ. ದಿಃ ೧೧-೦೭-೨೦೧೧ ರಂದು ೪೦ ಸೆಂಟ್ಸ್ ಜಾಗವನ್ನು ನಾವು ೪ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.೬೫/೩ರಲ್ಲಿ ೪೦ ಸೆಂಟ್ಸ್ ತರಿ ಜಾಗವನ್ನು ೪ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸುತ್ತಿರುವ ದಾಖಲೆಯಲ್ಲಿ ಪಾರ್ವತಿ ಎಂದು ಇರುವ ಸಹಿಯ ರೀತಿಯಲ್ಲೆ ನಾನು ಸಹಿಯನ್ನು ಮಾಡುತ್ತೇನೆ. ಸಾಕ್ಷಿಗೆ ತೋರಿಸಿದ ದಾಖಲೆ ಯಾವ ದಾಖಲೆ ಎಂದು ಗುರುತಿಸುವ ಸಲುವಾಗಿ ಅದನ್ನು ನಿಶಾನೆ ಡಿ-೧ ಎಂದು ಗುರುತಿಸಲಾಯಿತು. ಸಾಕ್ಷಿಗೆ ತೋರಿಸಲಾದ ಸಹಿಯನ್ನು ನಿಶಾನೆ ಡಿ-೧(ಎ) ಎಂದು ಗುರುತಿಸಲಾಯಿತು. ನಿಶಾನೆ ಡಿ-೧ರ ಪ್ರತಿಯೊಂದು ಪುಟದಲ್ಲಿರುವ ಸಹಿಗಳ ರೀತಿಯಲ್ಲಿಯೇ ನಾನು ಸಹಿಯನ್ನು ಮಾಡುತ್ತೇನೆ. ನಿಶಾನೆ ಡಿ-೧ರಂತೆ ನಾವು ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ. ಸಾಕ್ಷಿ ಸ್ವತಃ ಮದುವೆಗೋಸ್ಕರ ಜಂಟಿ ಇರುವ ಆಸ್ತಿಯನ್ನು ಮಾರಾಟ ಮಾಡಿರತ್ತೇವೆ ಎನ್ನುತ್ತಾರೆ. ನನ್ನ ತಂದೆ, ತಾಯಿಯ ಸಹಿಯನ್ನು ನಾನು ಗುರುತಿಸಬಲ್ಲೆ. ನಿಶಾನೆ ಡಿ-೧ರಲ್ಲಿ ನನ್ನ ತಂದೆ ತಾಯಿಯ ಸಹಿ ಇರುತ್ತವೆ. ಅವುಗಳನ್ನು ನಿಶಾನೆ ಡಿ-೧(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಶಾನೆ ಡಿ-೧ನ್ನು ಸಿ.ಜಿ. ಲಲಿತಾ ಎಂಬ ದಸ್ತಾವೇಜು ಬರಹಗಾರರು ಬರವಣಿಗೆ ಮಾಡಿರುತ್ತಾರೆ ಎನ್ನುವುದು ಸರಿ. ನಿಶಾನೆ ಡಿ-೧ನ್ನು ಬರವಣಿಗೆ ಮಾಡಿದ ನಂತರ ಎಲ್ಲಾ ವಿಷಯಗಳನ್ನು ತಿಳಿಸಿದ ನಂತರ ನಾನು ಮತ್ತು ನನ್ನ ತಂದೆ ತಾಯಿ ಸಹಿ ಮಾಡಿರುತ್ತೇವೆ ಎನ್ನುವುದು ಸರಿ. ಉಪನೋಂದಣಾಧಿಕಾರಿಗಳ ಸಮಕ್ಷಮ ನಿಶಾನೆ ಡಿ-೧ರಲ್ಲಿ ಬರೆದಿರುವ ವಿಷಯಗಳು ಸರಿ ಇವೆ ಎಂದು ಒಪ್ಪಿಕೊಂಡು ನಿಶಾನೆ ಡಿ-೧ಕ್ಕೆ ಸಹಿ ಮಾಡಿರುತ್ತೇವೆ ಎನ್ನುವುದು ಸರಿ.

ನಿಶಾನೆ ಡಿ-೧ನ್ನು ಹೊರತುಪಡಿಸಿ ಬೇರೆ ಕ್ರಯಪತ್ರಗಳ ಮೂಲಕವೂ ಕೂಡ ನನ್ನ ತಂದೆ ಅವರ ಪಾಲಿಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. ನಿಶಾನೆ ಪಿ-

೧ ಮತ್ತು ನಿಶಾನೆ ಪಿ-೨ರಲ್ಲಿ ಕಾಣಿಸಿರುವ ಎಲ್ಲಾ ವ್ಯಕ್ತಿಗಳನ್ನು ನಾವು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಣ್ಣುವಂಡ ಗೌರಮ್ಮ, ಸಣ್ಣುವಂಡ ಮುತ್ತಪ್ಪರವರು ನನಗೆ ಗೊತ್ತಿಲ್ಲ. ಸಣ್ಣುವಂಡ ಪುಷ್ಪನವರು ನನಗೆ ಗೊತ್ತಿರುತ್ತಾರೆ. ಸಣ್ಣುವಂಡ ಗೌರಮ್ಮ ಹಾಗೂ ಸಣ್ಣುವಂಡ ಮುತ್ತಪ್ಪನವರು ನಮ್ಮ ಕುಟುಂಬದವರೇ ಎನ್ನುವುದು ಸರಿಯಲ್ಲ. ಹೀಗಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಕೂಡ ಸಣ್ಣುವಂಡ ಕುಟುಂಬಕ್ಕೆ ಇರುತ್ತದೆ ಎನ್ನುವುದು ಸರಿ. ಆ ರೀತಿ ಇರುವ ಬೇರೆ ಆಸ್ತಿಗಳು ಯಾವುದು ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂ.೨೯/೨ರಲ್ಲಿ ೧ ಎಕರೆ ೪೫ ಸೆಂಟ್ಸ್ ಜಮ್ಮಾ ಬಾಣೆ ಜಾಗ ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಎನ್ನುವುದು ಸರಿಯಲ್ಲ. ಸರ್ವೆ ನಂ.೬೮/೩ರಲ್ಲಿ ೩೦ ಸೆಂಟ್ಸ್ ಜಮ್ಮಾ ಬಾಣೆ ಜಾಗ ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.೯೯/೧ರಲ್ಲಿ ಎಷ್ಟು ಎಕರೆ ಜಾಗವನ್ನು ಈ ಕೇಸಿಗೆ ಅಳವಡಿಸಿಕೊಂಡಿದ್ದೇವೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸರ್ವೆ ನಂ.೯೯/೧ರಲ್ಲಿ ನಾವು ಈ ದಾವೆಯಲ್ಲಿ ಅಳವಡಿಸಿಕೊಂಡಿರುವ ಜಾಗವನ್ನು ಹೊರತುಪಡಿಸಿ ಉಳಿಕೆ ಜಾಗ ಸಣ್ಣುವಂಡ ಕುಟುಂಬಕ್ಕೆ ಸೇರಿರುತ್ತದೆ ಆದರೆ ಬೋಪಯ್ಯನವರ ಭಾಗಕ್ಕೆ ಸೇರುವುದಿಲ್ಲ. ಮಾಯಮುಡಿ ಗ್ರಾಮದ ಸಣ್ಣುವಂಡ ಕುಟುಂಬದಲ್ಲಿ ಬೋಪಯ್ಯ ಹಾಗೂ ಚಂಗಪ್ಪನವರ ಭಾಗವನ್ನು ಹೊರತುಪಡಿಸಿ ಬೇರೆ ಯಾವುದೇ ಭಾಗ ಇರುವುದಿಲ್ಲ.

ಬೋಪಯ್ಯನವರ ಇಬ್ಬರು ಮಕ್ಕಳಾದ ತಿಮ್ಮಯ್ಯ ಮತ್ತು ಚಂಗಪ್ಪನವರು ಅವಿವಾಹಿತರಾಗಿಯೇ ಮೃತಪಟ್ಟಿರುತ್ತಾರೆ ಎನ್ನುವುದು ಸರಿ. ತಿಮ್ಮಯ್ಯನವರು ೧೯೮೫ರಲ್ಲಿ ತೀರಿಕೊಂಡಿರುತ್ತಾರೆ. ತಿಂಗಳು ಹಾಗೂ ದಿನಾಂಕ ಗೊತ್ತಿಲ್ಲ. ಚಂಗಪ್ಪನವರು ೧೯೯೦ ಅಥವಾ ೧೯೯೧ರಲ್ಲಿ ತೀರಿಕೊಂಡಿರುತ್ತಾರೆ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಚಂಗಪ್ಪನವರು ದಿನಾಂಕ ೩-೬-೨೦೦೩ರಂದು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯ ಹಾಗೂ ಚಂಗಪ್ಪ ಇಬ್ಬರೂ ಕೂಡ ಅವರು ತೀರಿಕೊಳ್ಳುವ ಪೂರ್ವದಲ್ಲಿ ಮರಣಶಾಸನವನ್ನು ಬರೆದಿಟ್ಟಿರುತ್ತಾರೆ ಎನ್ನುವುದು ಸರಿಯಲ್ಲ. ಬೋಪಯ್ಯನವರ ಆಸ್ತಿಗಳನ್ನು ಅವರೆಲ್ಲ

ಭಾಗಮಾಡಿಕೊಂಡಿದ್ದ ಕಾರಣ ಮರಣಶಾಸನವನ್ನು ಬರೆದಿರುತ್ತಾರೆ ಎನ್ನುವುದು ಸರಿಯಲ್ಲ. ಏಲ್ ವಿಚಾರ ತಿಳಿಯದೆ ಬಿದ್ದಪ್ಪ ಮತ್ತು ನನ್ನ ತಂದೆ ಮುತ್ತಣ್ಣ ಆಸ್ತಿಗಳನ್ನು ವಿಭಾಗಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ಬೋಪಯ್ಯನವರಿಗೆ ಎಷ್ಟು ಎಕರೆ ಕಾಫಿತೋಟ ಮತ್ತು ಬಾಣೆ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಅವರಿಗೆ ಸುಮಾರು ೫ ಎಕರೆ ಗದ್ದೆ ಇತ್ತು. ಬೋಪಯ್ಯನವರಿಗೆ ೮ ಎಕರೆ ಕಾಫಿತೋಟ ಹಾಗೂ ೪ ಎಕರೆ ಗದ್ದೆ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಬೋಪಯ್ಯನವರ ನಾಲ್ಕು ಜನ ಮಕ್ಕಳು ಆ ಆಸ್ತಿಗಳನ್ನು ಸಮಾನಾಗಿ ಭಾಗಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

೩ನೇ ಪ್ರತಿವಾದಿ ನನಗೆ ಗೊತ್ತಿರುತ್ತಾರೆ. ನನ್ನ ತಂದೆ, ತಾಯಿ ಹಾಗೂ ತಿಮ್ಮಯ್ಯ ಸೇರಿಕೊಂಡು ೩ನೇ ಪ್ರತಿವಾದಿಗೆ ಸರ್ವೆ ನಂ.೩೦/೨ರಲ್ಲಿ ೨ವರೆ ಎಕರೆ ಕಾಫಿತೋಟವನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾಯಿ ೮ನೇ ಪ್ರತಿವಾದಿಗೆ ಸರ್ವೆ ನಂ.೨೯/೧ರಲ್ಲಿ ೩೫ ಸೆಂಟ್ಸ್ ಕಾಫಿತೋಟವನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಸ್ವಾಧೀನದಲ್ಲಿ ೧ ಎಕರೆಯಷ್ಟು ಗದ್ದೆ ಇರುತ್ತದೆ. ಅದು ಸರ್ವೆ ನಂ.೬೫/೩ರಲ್ಲಿ ಇರುತ್ತದೆ. ಅದರಲ್ಲಿ ನನ್ನ ತಾಯಿ ಭತ್ತ ಬೆಳೆಯುತ್ತಿದ್ದಾರೆ. ನಮ್ಮ ಸ್ವಾಧೀನದಲ್ಲಿ ೨ ಎಕರೆ ೧೦ ಸೆಂಟ್ಸ್ ಗದ್ದೆ ಇರುತ್ತದೆ ಎನ್ನುವುದು ಸರಿಯಲ್ಲ. ಅದನ್ನು ೪ನೇ ಪ್ರತಿವಾದಿಗೆ ಭೋಗ್ಯಕ್ಕೆ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

ನಿಶಾನೆ ಪಿ-೧೦ರಲ್ಲಿ ಸೋಮಣ್ಣನವರ ತಂದೆ ಬಿದ್ದಪ್ಪನವರು ಮಾಚಯ್ಯನವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ನಿಶಾನೆ ಪಿ-೧೦ರಲ್ಲಿ ಬರೆದಿರುವ ವಿಚಾರ ಸರಿ ಇರುತ್ತದೆ. ನಿಶಾನೆ ಪಿ-೧೧ರಲ್ಲಿ ಬಿದ್ದಪ್ಪನವರು ಉತ್ತಯ್ಯನವರಿಗೆ ಆಸ್ತಿಯನ್ನು ಮರಾಟ ಮಾಡಿರುತ್ತಾರೆ. ನಿಶಾನೆ ಪಿ-೧೧ರಲ್ಲಿ ಬರೆದಿರುವ ವಿಚಾರ ಸರಿ ಇರುತ್ತದೆ. ನಿಶಾನೆ ಪಿ-೧೨ರಲ್ಲಿ ಹೊರಡಿಸಿರುವ ಪ್ರಕಟಣೆಯನ್ನು ಯಾರು ಕೊಡಿಸಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಪ್ರಕಟಣೆ ಮಾಡುವ ಪೂರ್ವದಲ್ಲಿ ಈ ರೀತಿ ಪ್ರಕಟಣೆ ಮಾಡುತ್ತೇವೆ ಎಂದು ನಮಗೆ ತಿಳಿದಿರುವುದಿಲ್ಲ. ೧ನೇ

ಪ್ರತಿವಾದಿ ಹಾಗೂ ಅವರ ತಂದೆ ನಿಶಾನೆ ಪಿ-೧೨ರಂತೆ ಪ್ರಕಟಣೆಯನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಬೋಪಯ್ಯನವರ ಕುಟುಂಬದಲ್ಲಿ ಈಗಾಗಲೇ ಭಾಗ ಆಗಿರುವ ಕಾರಣ ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಸಾಧನೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

ಸಹಿ:

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ: ವಿರಾಜಪೇಟೆ.

ಸಾಕ್ಷಿದಾರರ ಸಹಿ: